ಶ್ರೀ ಕಡಿದಾಳ್ ದಿವಾಕರ್.—ಸಕ್ಕರೆ ಕಾರ್ಖಾನೆ ಶುರುವಾದ ಮೇಲೆ ೨೫೦೦ ಟನ್ ಕಬ್ಬನ್ನು ಅರೆಯುತ್ತದೆಂದು ಹೇಳಿದ್ದಾರೆ. ಮೈಸೂರು ಪೇಪರ್ ಮಿಲ್ಸ್‌ನವರ ಪ್ರಕಾರ ಮೂರನೆಯ ಒಂದು ಭಾಗ ಬಗಸ್ ಕಚ್ಚಾಪದಾರ್ಥ ಕಾಗದ ತಯಾರಿಕೆಯಲ್ಲಿ ಉಪಯೋಗವಾಗುತ್ತದೆಂದು ಹೇಳಿದ್ದಾರೆ. ೨,೫೦೦ ಟನ್ ಕಬ್ಬು ಅರೆದರೆ ಮೂರನೆಯ ಒಂದು ಭಾಗ ಬಗಸ್ ಬರುವುದಕ್ಕೆ ಸಾಧ್ಯವಿಲ್ಲ. ಅಷ್ಟು ಬರಬೇಕಾದರೆ ಕನಿಷ್ಟ ೧೦ ಸಾವಿರ ಟನ್ ಕಬ್ಬು ಅರೆಯುವಂತೆ ವ್ಯವಸ್ಥೆ ಮಾಡಬೇಕು. ೨೫೦೦ ಟನ್ ಕಬ್ಬು ಅರೆಯುವುದರಿಂದ ಮೂರನೆಯ ಒಂದು ಭಾಗ ಬಗ್ಯಸ್ ಬರುವುದಕ್ಕೆ ಸಾಧ್ಯವಿಲ್ಲ. ಅಷ್ಟು ಬರಬೇಕಾದರೆ ಕನಿಷ್ಟ ಆದ್ದರಿಂದ ೧೦,೦೦೦ ಟನ್ ಕಬ್ಬು ಅರೆಯುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ೨,೫೦೦ ಟನ್ ಕಬ್ಬು ಅರೆಯುವುದರಿಂದ ಮೂರನೇ ಒಂದು ಭಾಗ ಬಗಸ್ ಬರುವುದಕ್ಕೆ ಸಾಧ್ಯತೆ ಇದೆಯೆ ?

ಶ್ರೀ ಎಂ. ವೀರಪ್ಪ ಮೊಯಿಲಿ —ಮಾನ್ಯ ಅಧ್ಯಕ್ಷರೇ, ಈ ಕಾಗದ ಕಾರ್ಖಾನೆಯು ವಿಸ್ತರಣಾ ಯೋಜನೆಯನ್ನು ಕೈಕೊಂಡಾಗ ಒಂದು ಸಕ್ಕರೆ ಕಾರ್ಖಾನೆಯನ್ನು ಸಹ ಸ್ಥಾಪನೆ ಮಾಡಿ ತನ್ಮೂಲಕ ೧೫ ಪರ್ಸೆಂಟ್ ಪಲ್ಪ್‌ನ್ನು ಈ ಕಾಗದದ ಕಾರ್ಖಾನೆಗೆ ಇದೇ ಸಕ್ಕರೆ ಕಾರ್ಖಾನೆಯಿಂದ ಬರುವಂತಹ ಬಗ್ಯಾಸ್ ಅನ್ನು ಕೊಡಬೇಕೆಂದು ಯೋಚನೆ ಮಾಡಿದ್ದೆವು. ಆದರೆ ಇದನ್ನು ಅನುಷ್ಠಾನ ಮಾಡುವುದಕ್ಕೆ ತಡವಾಯಿತು. ಏಕೆಂದರೆ, ಈ ವಿಸ್ತರಣಾ ಯೋಜನೆಯ ವಿಚಾರದಲ್ಲಿ ಐ.ಡಿ.ಬಿ.ಐ ನವರು ಹೇಳಿದ್ದೇನೆಂದರೆ, ಈ ವಿಸ್ತರಣಾ ಯೋಜನೆಯ ಕೆಲಸವನ್ನು ಕೊನೆಯ ಹಂತಕ್ಕೆ ತಂದಮೇಲೆ ಸರ್ಕಾರಿ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕೆಂದು ಹೇಳಿದ್ದರಿಂದ ಅದು ತಡವಾಯಿತು. ಈಗ ಈ ವಿಸ್ತರಣಾ ಯೋಜನೆಯ ಕೆಲಸ ಪ್ರಾರಂಭವಾಗಿರುವುದರಿಂದ ಹಣಕಾಸಿನ ಸಂಸ್ಥೆಗಳಿಂದಲಾಗಲೀ ಮತ್ತು ಐ.ಡಿ.ಬಿ.ಐ. ನವರಿಂದಲಾಗಲೀ ಇನ್ನು ತೊಂದರೆ ಇರುವುದಿಲ್ಲ. ಈ ಯೋಜನೆಯ ಕೆಲಸವೂ ಸಹ ಪ್ರಾರಂಭವಾಗುತ್ತದೆ.

ಶ್ರೀ ಕಡಿದಾಳ್ ದಿವಾಕರ್.—ಐ.ಡಿ.ಬಿ.ಐ ನವರು ಈ ಸಕ್ಕರೆ ಕಾರ್ಖಾನೆಯ ಬಗ್ಯಾಸ್ ಅನ್ನು ಉಪಯೋಗ ಮಾಡಿ ಕಾಗದ ತಯಾರಿಸಿದರೆ ಒಳ್ಳೆಯ ಕ್ವಾಲಿಟಿ ಇರುವುದಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಾ ?

SRI M. VEERAPPA MOILY.—When the I.D.B.I. authorities have accepted this project, it becomes a component of this project.

ಶ್ರೀ ಎಚ್. ಎಲ್. ತಿಮ್ಮೇಗೌಡ.—೧೫ ಪರ್ಸೆಂಟ್ ರಾ-ಮೆಟೀರಿಯಲ್‌ನ್ನು ಈ ಬಗ್ಯಾಸ್ ಮೂಲಕ ಒದಗಿಸುವ ವಿಚಾರ ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿದೆ ಎಂದು ತಾವು ಹೇಳಿದಿರಿ. ಅಲ್ಲಿ ಪ್ರತಿದಿವಸ ೨,೫೦೦ ಟನ್ ಕಬ್ಬನ್ನು ಅರೆಯುವುದರಿಂದ ೧೫ ಪರ್ಸೆಂಟ್‌ನಷ್ಟು ರಾ-ಮೆಟೀರಿಯಲ್ಸ್ ಬರುತ್ತದೆಂದು ತಾವು ಹೇಳುತ್ತಿರುವುದು, ಒಂದು ವೇಳೆ ಸಾಧ್ಯವಾಗದಿದ್ದರೆ ಇದರ ಒಂದು ಈ ಸಾಮರ್ಥ್ಯವನ್ನು ಹೆಚ್ಚು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

SRI M. VEERAPPA MOILY.—2,500 tonnes of sugarcane will yield 65 tonnes of bagasse per day. On this calculation we have estimated that about 15% of the total requirement per year will be provided by the sugar factory.

**Amount spent by the PWD in Karkala Taluk in D.K.**

747 DR. DAMODAR MULKI (Moodabidri),—Will the Minister for Public Works be pleased to state :—

(a) the amount spent by the Public Works Department under various Heads at Karkala Taluk, Dakshina Kannada District from the year 1975-76 to 1980-81 (please give break up of figures for each year);

(b) the amount spent in Moodabidri Firka area during the above said period (please give break up figures for) every year 1975-76 to 1981-82 ?

SRI KAGODU THIMMAPPA (Minister for Public Works). —

(a)—

THE YEARWISE BREAK UP OF EXPENDITURE FIGURES UNDER VARIOUS HEADS IN KARKALA TALUK ARE AS UNDER.

| | Heads of Account | 1975-76 | 1976-77 | 1977-78 | 1978-79 | 1979-80 | 1980-81 | 1981-82 upto 12/81 | Total |
|---|---|---|---|---|---|---|---|---|---|
| | | Rupees in Lakhs | | | | YEAR | | | |
| 1. | 337 Roads & Bridges | 9.23 | 11.22 | 11.04 | 11.07 | 10.57 | 6.98 | 3.82 | 63.93 |
| 2. | 537 Roads & Bridges | 7.27 | 8.92 | 7.88 | 10.61 | 20.26 | 14.43 | 10.71 | 80.08 |
| 3. | Bldgs. (Major/Minor) | 0.49 | 0.81 | 2.26 | 0.80 | 0.42 | 0.84 | 1.11 | 6.73 |
| | Total... | 16.99 | 20.95 | 21.18 | 22.48 | 31.25 | 22.25 | 15.64 | 150.7 |

(b)—

THE AMOUNT SPENT IN MOODABIDRI REVENUE FIRKA UNDER THE VARIOUS AS UNDER

(Rupees in Lakhs.)

| | YEAR | | | | | | | |
|---|---|---|---|---|---|---|---|---|
| | 75-76 | 76-77 | 77-78 | 78-79 | 79-80 | 80-81 | 81-82 | Total |
| 1. 337 Roads & Bridges | 4.47 | 2.32 | 1.62 | 2.84 | 3.38 | 1.66 | 2.32 | 18.61 |
| 2. 537 Roads & Bridges | — | — | — | 1.20 | 3.96 | 1.05 | 4.52 | 10.73 |
| 3. Blds (Major/Minor) | 0.17 | 0.15 | 0.74 | 0.41 | 0.31 | 0.57 | 1.11 | 3.46 |
| Total... | 4.64 | 2.47 | 2.36 | 4.45 | 7.65 | 3.28 | 7.95 | 32.80 |

ಶ್ರೀ ದಾವೋದರ ಮುಲ್ಕಿ.—ಮೂಡಬಿದ್ದೆ ಕಂದಾಯ ಫಿರ್ಕಾ ಪ್ರದೇಶದಲ್ಲಿ ಕಳೆದ ವರ್ಷ ೭.೯೫ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದೀರಿ. ಅಂದರೆ ಯಾವ ಯಾವ ಕೆಲಸಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಲಾಯಿತೆಂಬ ಬಗ್ಗೆ ವಿವರಣೆ ಕೊಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ:—ಕೆಲಸಗಳ ವಿವರ ಈಗ ನನ್ನ ಹತ್ತಿರ ಇಲ್ಲ. ಆದರೆ ಈ ತಾಲ್ಲೂಕ್‌ಗಳಲ್ಲಿ ಎಷ್ಟೆಷ್ಟು ಹಣವನ್ನು ಯಾವ ಯಾವ ಕೆಲಸಗಳಿಗೆ ಖರ್ಚು ಮಾಡಲಾಗಿದೆ ಎಂಬ ವಿವರಗಳನ್ನು ಇಲ್ಲಿ ಕೊಡಲಾಗಿದೆ.

ಶ್ರೀ ದಾವೋದರ ಮುಲ್ಕಿ.—ಇಲ್ಲಿ ಕಾರ್ಕಳ ತಾಲ್ಲೂಕ್‌ಗೆ ನಿಮ್ಮ ಇಲಾಖೆ ಮೂಲಕ ೧೯೭೫ ರಿಂದ ಡಿಸೆಂಬರ್ ೧೯೮೧ರವರೆಗೆ ೧೫೦ ಲಕ್ಷ ರೂ.ಗಳು ಸಿಕ್ಕಿದ್ದರೆ ಮೂಡಬಿದ್ರೆ ರೆವಿನ್ಯೂ ಫಿರ್ಕಾ ಪ್ರದೇಶದಲ್ಲಿರುವ ೩೦ ಗ್ರಾಮಗಳಿಗೆ ಕೇವಲ ೩.೨ ಲಕ್ಷ ರೂ.ಗಳು ಸಿಕ್ಕಿದೆ. ಅಂದರೆ ಎರಡು ರೆವಿನ್ಯೂ ಫಿರ್ಕಾ ಪ್ರದೇಶಗಳಿಗೆ ೧೫೦ ಲಕ್ಷ ರೂ.ಗಳನ್ನು ಖರ್ಚು ಮಾಡಿ ಬಂದು ರೆವಿನ್ಯೂ ಫಿರ್ಕಾ ಪ್ರದೇಶಕ್ಕೆ ಕೇವಲ ೩.೨ ಲಕ್ಷ ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಇದರ ಜೊತೆಗೆ ಮತ್ತೆ ಕೆಲವು ವಿವರಗಳನ್ನು ತಮ್ಮ ಗಮನಕ್ಕೆ ತರಬೇಕೆಂದರೆ, ಕಳೆದ ವರ್ಷ ನಮ್ಮ ತಾಲ್ಲೂಕ್‌ನಲ್ಲಿ ೭ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ ಎಂದು ಇಲ್ಲಿ ಹೇಳಿದ್ದೀರಿ. ಆದರೆ ಕಳೆದ ವರ್ಷ ಒಂದು ಲಕ್ಷ ರೂ.ಗಳೂ ಸಹ ಖರ್ಚಾಗಿಲ್ಲ. ಆದ್ದರಿಂದ ತಾವು ಯಾವ ಕೆಲಸಕ್ಕೆ ಈ ಹಣ ಖರ್ಚು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು. ನನಗೆ ತಿಳಿದಂತೆ ಕಳೆದ ವರ್ಷ ಯಾವ ಕೆಲಸವನ್ನೂ ತಾವು ಮಂಜೂರು ಮಾಡಿಲ್ಲ. ಇದರ ಜೊತೆಗೆ ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಪ್ರಾದೇಶಿಕ ಅಸಮತೆಯನ್ನು ಹೋಗಲಾಡಿಸುತ್ತೇವೆಂದು ಹೇಳಿದ್ದಾರೆ. ಆದರೆ ಕಳೆದ ಮೂರು ವರ್ಷಗಳಲ್ಲಿ ಇವರು ಯಾವ ರೀತಿ ಹೋಗಲಾಡಿಸಿದ್ದಾರೆಂಬುದನ್ನು ತಾವು ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಒಂದು ಫಿರ್ಕಾ ಕಾರ್ಕಳ ತಾಲ್ಲೂಕ್‌ನಲ್ಲಿಯೇ ಬರುತ್ತದೆ. ಇದರ ಜೊತೆಗೆ ಕೆಲವು ಸಲ ಒಂದೊಂದು ಭಾಗಕ್ಕೆ ಹೆಚ್ಚು ಹಣ ಖರ್ಚು ಮಾಡಬೇಕಾಗಿ ಬರುತ್ತದೆ. ಒಂದು ಕಡೆ ೧೦ ಲಕ್ಷ ರೂ.ಗಳ ಒಂದು ಸೇತುವೆ ಕೆಲಸ ತೆಗೆದುಕೊಂಡರೆ, ಅಂತಹ ಕೆಲಸವನ್ನೇ ಎಲ್ಲ ಕಡೆಯೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಕೆಲವು ಕೆಲಸಗಳನ್ನು ಸಹ ನಾವು ಅವರ ಭಾಗದಲ್ಲಿ ತೆಗೆದುಕೊಂಡಿದ್ದೇವೆ. ಆದ್ದರಿಂದ ಅಂತಹ ಒಂದು ಹೆಚ್ಚಿನ ವ್ಯತ್ಯಾಸವೇನೂ ಆಗಿಲ್ಲ. ಒಂದು ವೇಳೆ ಮಾನ್ಯ ಸದಸ್ಯರಿಗೆ ಆ ರೀತಿ ಅನಿಸಿದ್ದರೆ ಅದನ್ನು ಸರಿಪಡಿಸುವುದಕ್ಕೆ ಖಂಡಿತವಾಗಿ ವ್ಯವಸ್ಥೆ ಮಾಡುತ್ತೇವೆ.

ಶ್ರೀ ದಾವೋದರ ಮುಲ್ಕಿ.—ಇಲ್ಲಿರುವಂತಹ ವ್ಯತ್ಯಾಸ ಮಾರ್ಜಿನಲ್‌ನಲ್ಲಿದ್ದರೆ ಒಪ್ಪಬಹುದಾಗಿತ್ತು. ಆದರೆ ಇಲ್ಲಿ ೫೯ ಗ್ರಾಮಗಳಿಗೆ ಸಂಬಂಧಪಟ್ಟಂತೆ ಒಂದೂವರೆ ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ಮೂವತ್ತು ಗ್ರಾಮಗಳಿಗೆ ಸಂಬಂಧಪಟ್ಟಂತೆ ಕೇವಲ ೩.೨ಲಕ್ಷ ರೂಗಳನ್ನು ಖರ್ಚು ಮಾಡಿದ್ದಾರೆ. ದೊಡ್ಡ ಸೇತುವೆ ಕೆಲಸ ತೆಗೆದುಕೊಂಡಾಗ ಈ ರೀತಿ ವ್ಯತ್ಯಾಸವಾಗುತ್ತದೆಂದು ಮಾನ್ಯ ಸಚಿವರು ಹೇಳುವುದಾದರೆ, ನಮ್ಮ ಭಾಗದ ೩೦ ಗ್ರಾಮಗಳಿಗೆ ಸೇರಿದಂತೆ ಇನ್ನೂ ೧೦ ಸೇತುವೆ ಕೆಲಸಗಳನ್ನು ಮಾಡಿಸುವುದಿದೆ. ನಾನು ಹೆಸರುಗಳನ್ನು ಬೇಕಾದರೆ ಕೊಡುತ್ತೇನೆ. ಒಟ್ಟಿನಲ್ಲಿ ಇಲ್ಲಿ ವ್ಯತ್ಯಾಸ ಬಹಳ ಇದೆ ಎಂಬುದು ಮಾನ್ಯ ಸದನಕ್ಕೂ ಅರ್ಥವಾಗಬಹುದು. ಇದನ್ನು ನೋಡಿದಾಗ ಮಾನ್ಯ ಮಂತ್ರಿಗಳು ಏನಾದರೂ ಅವರವರ ಕ್ಷೇತ್ರಗಳಲ್ಲಿ ಮಾತ್ರ ಹೆಚ್ಚು ಹಣವನ್ನು, ಏನಾದರು ಖರ್ಚು ಮಾಡಬೇಕೆಂದು ನಿರ್ಣಯ ಮಾಡಿದ್ದಾರೆಯೇ ಎಂದು ನಾನು ತಮ್ಮನ್ನು ಕೇಳಬಯಸುತ್ತೇನೆ?

ಶ್ರೀ ಕಾಗೋಡು ತಿಮ್ಮಪ್ಪ.—ಆ ರೀತಿ ಏನೂ ಇಲ್ಲ, ಕೆಲವು ಸಲ ದೊಡ್ಡ ಸೇತುವೆ ಕೆಲಸ ತೆಗೆದುಕೊಂಡಾಗ ಹೆಚ್ಚು ಹಣ ಖರ್ಚಾಗಿರುತ್ತದೆ. ಈಗ ಉದಾಹರಣೆಗೆ ಹೇಳಬೇಕೆಂದರೆ, ಆಗುಂಬೆಯಿಂದ ಸೋಮೇಶ್ವರ ಮಾರ್ಗವಾಗಿ ಕಾರ್ಕಳಕ್ಕೆ ಹೋಗಬೇಕಾದರೆ, ಆ ಮಾರ್ಗದಲ್ಲಿ ಬರುವಂತಹ ಹಳೆಯದಾದ ದೊಡ್ಡ ದೊಡ್ಡ ಸೇತುವೆಗಳು ಏನಿವೆ, ಅವುಗಳನ್ನು ರಿ–ಕನ್‌ಸ್ಟ್ರಕ್ಷನ್ ಮಾಡಿದ್ದರಿಂದ ಹೆಚ್ಚು ಹಣ ಖರ್ಚಾಗಿದೆ. ಮಾನ್ಯ ಸದಸ್ಯರ ಕ್ಷೇತ್ರದಲ್ಲಿಯೂ ಸಹ ನಾನೇ ಒಂದು ದೊಡ್ಡ ಬ್ರಿಡ್ಜ್ ಕೆಲಸವನ್ನು ಉದ್ಘಾಟನೆ ಮಾಡಿ ಬಂದಿದ್ದೇನೆ. ಇಂತಹ ದೊಡ್ಡ ಸೇತುವೆಗಳ ಮತ್ತು ದೊಡ್ಡ ರಸ್ತೆಗಳ ಕೆಲಸ ತೆಗೆದುಕೊಂಡಾಗ ಒಂದೇ ವರ್ಷದಲ್ಲಿ ಹಣವೆಲ್ಲಾ ಖರ್ಚಾಗುವುದಿಲ್ಲ. ಅದು ೨–೩ ವರ್ಷಗಳಲ್ಲಿ ಖರ್ಚಾಗುತ್ತದೆ. ಆದ್ದರಿಂದ ದೊಡ್ಡ ದೊಡ್ಡ ಸೇತುವೆ ಕೆಲಸಗಳನ್ನು ತೆಗೆದುಕೊಂಡಾಗ ಮಾತ್ರ ಹಣ ಹೆಚ್ಚು

ಖರ್ಚಾಗುತ್ತದೆ. ಈಗ ಮಾನ್ಯ ಸದಸ್ಯರಲ್ಲಿ ಈ ಬಗ್ಗೆ ಏನು ಒಂದು ಅನುಮಾನ ಇವೆ, there cannot be any scope for apprehension as far as this matter is concerned.

ಶ್ರೀ ದಾಮೋದರ ಮುಲ್ಕಿ.—೧೯೮೨-೮೩ನೇ ಸಾಲಿನಲ್ಲಿ ಕೂಡ ಕಾರ್ಕಳ ತಾಲ್ಲೂಕ್‌ಗೆ ೬೦ ಲಕ್ಷ ರೂ.ಗಳನ್ನು ಮತ್ತು ಮೂಡಬಿದ್ರೆ ತಾಲ್ಲೂಕ್‌ಗೆ ಕೇವಲ ೫ ಲಕ್ಷ ರೂ.ಗಳನ್ನು ನಿಗದಿ ಮಾಡಿದ್ದಾರೆ, ಇದನ್ನು ತಾವು ಗಮನದಲ್ಲಿಟ್ಟುಕೊಂಡು ಈ ಹಣವನ್ನು ಹೆಚ್ಚು ಮಾಡಲು ಪ್ರಯತ್ನ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಆ ಹಣ ನಮ್ಮ ಇಲಾಖೆಗೆ ಸಂಬಂಧಪಟ್ಟಿದ್ದೋ ಆಥವಾ ಬೇರೆ ಇಲಾಖೆಗೆ ಸೇರಿದ್ದೋ ಎಂಬುದು ನನಗೆ ಗೊತ್ತಿಲ್ಲ. ನಾನು ವಿವರ ನೋಡಿದ ನಂತರ ಹೇಳುತ್ತೇನೆ

## Transport Facilities in Bangalore City

338. SRI M. CHANDRASHEKAR (Jayanagar).—Will the Minister for Transport and Minor Irrigation be Pleased to state,-

(a) number of new bus routes started during the year 1980-81 and upto 31-12-81 by the B.T.S. Division in Bangalore City;

(b) number of new buses added to existing fleet during this year;

(c) the future plans of the Karnataka State Road Transport Corporation to augment the growing necessity of the transport facilities in the City?

SRI M.M.J. SADYOJATHA (Minister for Transport and Minor Irrigation).—

(a) During the year 1980-81 B.T.S. introduced 13 new routes with 13 vehicles. During the period 1-4-81 to 31-12-81 BTS introduced a total of 24 new routes with 24 buses.

(b) During the year 1980-81, 102 new buses were added to the BTS fleet. The total number of new buses added to the BTS fleet for the period 1-4-81 to 31-12-81 is 50. Besides this 171 reconditioned vehicles were allotted to BTS Division for replacement of old vehicles and partly for augmentation of schedules.

(c) It is proposed to add 80 schedules to meet the growing necessity of the transport facility in the City.

ಶ್ರೀ ಎಂ. ಚಂದ್ರಶೇಖರ್.—ಈಗ ಬೆಂಗಳೂರು ನಗರದಲ್ಲಿ ಒಟ್ಟು ಎಷ್ಟು ಮಾರ್ಗಗಳಲ್ಲಿ ಎಷ್ಟು ವಾಹನಗಳು ಓಡುತ್ತಿವೆ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ತಾ: ೧-೧-೧೯೮೧ರಿಂದ ೩೦-೩-೧೯೮೧ರವರೆಗೆ ಒಟ್ಟು ೭೭೫ ವಾಹನಗಳು ಓಡುತ್ತಿವೆ. ಇದರಲ್ಲಿ ೧೬೯ ಹೊಸ ಬಸ್‌ಗಳನ್ನು ಸೇರಿಸಲಾಗಿದೆ.

ಶ್ರೀ ಎಂ. ಚಂದ್ರಶೇಖರ್.—ಈಗ ಹಳೆಯ ಮತ್ತು ಹೊಸ ಬಸ್‌ಗಳು ಸೇರಿ ಒಟ್ಟು ಎಷ್ಟು ಬಸ್‌ಗಳು ಓಡುತ್ತಿವೆ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಈಗ ೨೮೦ ಬಸ್‌ಗಳು ಓಡುತ್ತಿವೆ,